ಸಭಾಧ್ಯಕ್ಷರೇ, ಮಾನ್ಯ ಸಚಿವರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ. ಅದನ್ನು ಅವರು ತೋರಿಸಿಕೊಟ್ಟಿದ್ದಾರೆ ಮತ್ತು ಅವರು ಈ ಕೆಲಸ ಮಾಡಿಕೊಡುತ್ತಾರೆ ಎಂಬ ವಿಶ್ವಾಸ ನನಗೆ ಇದೆ. ದಯಮಾಡಿ ಸ್ವಲ್ಪ ಹಣವನ್ನು ತಕ್ಷಣದಲ್ಲಿ ಬಿಡುಗಡೆ ಮಾಡಿ, ಇಂತಹ ಸಣ್ಣಪುಟ್ಟ ಲೋಪದೋಷಗಳು ಏನಿವೆ, ಟ್ಯೂಬ್‌ಲೈಟ್ ಹಾಕುವುದು, ಅಥವಾ ಬೋರ್‌ವೆಲ್ ಹೊಡೆಸಿಕೊಡುವುದು ಇಂತಹದ್ದಕ್ಕೆ ಅವರು ಕಾರ್ಯ ಜರುಗಿಸಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:-** ಮಾನ್ಯ ಸಭಾಧ್ಯಕ್ಷರೇ, ಕ್ಯಾತಮಾರನಹಳ್ಳಿ ಗ್ರಾಮದಲ್ಲಿ 1992ನೇ ಇಸವಿಯಲ್ಲಿ ಹೌಸಿಂಗ್ ಬೋರ್ಡಿನಿಂದ ಮನೆಗಳು ಕಂಪ್ಲೀಟ್ ಆಗಿವೆ. ನಗರ ಪಾಲಿಕೆಯವರಿಗೆ ತೆಗೆದುಕೊಳ್ಳಿ ಎಂದು ಹೇಳಿ ಹಲವಾರು ಪತ್ರಗಳನ್ನು ಬರೆದಿದ್ದೇವೆ. ಆದರೆ ಕಂದಾಯವನ್ನು ಸಾರ್ವಜನಿಕರಿಂದ ನಗರ ಪಾಲಿಕೆಯವರೂ ವಸೂಲು ಮಾಡುತ್ತಿಲ್ಲ, ಹೌಸಿಂಗ್ ಬೋರ್ಡ್‌ನವರೂ ವಸೂಲು ಮಾಡುತ್ತಿಲ್ಲ. ಹಲವಾರು ನೋಟೀಸ್‌ಗಳನ್ನು ಹೌಸಿಂಗ್ ಬೋರ್ಡಿನವರು ಕೊಟ್ಟಿದ್ದರೂ ಕಂದಾಯ ಕಟ್ಟುತ್ತಿಲ್ಲ. ಈಗ ಮತ್ತೆ ಒಂದು ಸಾರಿ ಮಹಾನಗರಪಾಲಿಕೆಗೆ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲವೆಂದರೆ ವಹಿಸಿಕೊಟ್ಟಿದ್ದೇವೆ ಎಂದು ನೇರವಾಗಿ ನಾನು ಒಂದು ಪತ್ರವನ್ನು ಬರೆಯುವುದಕ್ಕೆ ಪ್ರಯತ್ನಪಡುತ್ತೇನೆ. ಅದಕ್ಕೆ ಮತ್ತೆ ಇನ್ನೊಂದು ಪತ್ರ ಬರೆಯುತ್ತೇನೆ.

**ವಿಷಯ:- ಬೇಡಕಿಹಾಳ ಗ್ರಾಮದಲ್ಲಿ ಬೆಂಕಿ ಆಕಸ್ಮಿಕ**

374 (2469) **ಶ್ರೀ ಪ್ರಕಾಶ್ ಹುಕ್ಕೇರಿ (ಸದಲಗಾ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 28.4.96ರಂದು ಚಿಕ್ಕೋಡಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಅನಾಹುತ ಸಂಭವಿಸಿ 51 ಗುಡಿಸಲುಗಳು ಹಾಗೂ ದನಕರುಗಳು ಸಜೀವ ದಹನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಯದಲ್ಲಿ ಯಾವ ಸರ್ಕಾರಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು ಹಾಗೂ ಅವರು ನೀಡಿರುವ ಪರಿಹಾರದ ಮೊತ್ತ ಎಷ್ಟು?

ಇ) ಬೆಂಕಿ ಅನಾಹುತದಲ್ಲಿ ಹಾನಿಗೊಳಗಾದ ಈ ನಿರ್ಗತಿಕ ಕುಟುಂಬಗಳಿಗೆ ವಸತಿ ಹಾಗೂ ಇನ್ನಿತರ ಸೌಲಭ್ಯಗಳನ್ನು ದೊರಕಿಸುವ ಉದ್ದೇಶವು ಸರ್ಕಾರಕ್ಕೆ ಇರುವುದೇ? ಹಾಗಾದರೆ ಇದಕ್ಕೆ ಬೇಕಾಗುವ ಸಮಯ ಎಷ್ಟು?

**ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-**

ಅ) ಬಂದಿದೆ.

ಆ) ಅನಾಹುತ ಸಂಭವಿಸಿದ ಕೂಡಲೇ ತಹಸೀಲ್ದಾರರು ಭೇಟಿ ಕೊಟ್ಟು, ಅಗ್ನಿಶಾಮಕ ವಾಹನವನ್ನು ತರಿಸಿ ಕ್ರಮ ಕೈಗೊಂಡಿರುತ್ತಾರೆ. ಅಲ್ಲದೇ, ಬೆಳಗಾವಿ ಜಿಲ್ಲಾಧಿಕಾರಿಗಳು ಹಾಗೂ ಚಿಕ್ಕೋಡಿ ಉಪ ವಿಭಾಗಾಧಿಕಾರಿಯವರು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರಿಂದ ಸಂಗ್ರಹಿಸಿದ ಬೆಡ್‌ಶೀಟ್, ಬಾಂಡೆ ಸಾಮಾನುಗಳನ್ನು ಸಂತ್ರಸ್ಥರಿಗೆ ವಿತರಿಸುತ್ತಾರೆ.

ಪ್ರತಿ ಕುಟುಂಬಕ್ಕೆ ನಗದು ಪರಿಹಾರವಾಗಿ 1250-00 ಹಾಗೂ ಕಟ್ಟಡ ಸಾಮಗ್ರಿಗಾಗಿ ರೂ. 2000ದಂತೆ, ಒಟ್ಟು 37 ಕುಟುಂಬಗಳಿಗೆ ಪರಿಹಾರ ವಿತರಣೆ ಮಾಡಲಾಗಿದೆ.

(ಇ) ನಿವೇಶನರಹಿತ 18 ಜನರಿಗೆ ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಖಾಸಗಿ ಜಮೀನು ಖರೀದಿಸಿ ಆಶ್ರಯ ಯೋಜನೆಯಿಂದ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:-** ಮಾನ್ಯ ಅಧ್ಯಕ್ಷರೇ, ದಿನಾಂಕ 28.4.96ರಂದು ಬೀಡಕಿಹಾಳ ಗ್ರಾಮದಲ್ಲಿ ನಾಲ್ಕು ಎಕರೆ ಸುಮಾರು ಜಮೀನಿನಲ್ಲಿ 51 ಕುಟುಂಬಗಳು ಬೇರೆ ಬೇರೆ ಗ್ರಾಮಗಳಿಂದ, ಬೇರೆ ಬೇರೆ ಜಿಲ್ಲೆಗಳಿಂದ ಬಂದು ಅಲ್ಲಿ ತಮ್ಮ ಉದ್ಯೋಗ ಸಲುವಾಗಿ ಅವರು ವಸತಿ ಮಾಡುದ್ದರು. ಆದರೆ ಅಂದು ಮಧ್ಯಾಹ್ನ 3 ಗಂಟೆಗೆ ಬೆಂಕಿ ಹತ್ತಿಕೊಂಡು ಇಡೀ 51 ಗುಡಿಸಲುಗಳೂ ಅಲ್ಲಿ ಸುಟ್ಟು-ಹೋಗಿವೆ. ಆ 51 ಗುಡಿಸಲುಗಳಲ್ಲಿ ದನಕರು ಎಲ್ಲವೂ ಇದ್ದವು. ಅಲ್ಲಿ ಬೆಳ್ಳಿ ಇತ್ತು, ಬಂಗಾರ ಇತ್ತು. ಬಡವರು ಏನು ಕೂಡಿಸಿಹಾಕಿದ್ದರು, ಅದೆಲ್ಲಾ ದುಡ್ಡು ಇತ್ತು. ಅಲ್ಲಿ ಮಾಜಿ ವೈದ್ಯಕೀಯ ಸಚಿವರು ಕೂಡ ಆ ಗ್ರಾಮಕ್ಕೆ ಭೇಟಿ ಕೊಟ್ಟಿದ್ದರು. ಕೂಡಲೇ ಸರ್ಕಾರದಿಂದ ಏನು ಸಹಾಯಧನ ಬರುತ್ತದೆ ಅದನ್ನು ಕೊಡಿಸುತ್ತೇನೆ ಎಂದು ಅವರು ಹೇಳಿದ್ದರು. ಆದರೆ ಇವತ್ತಿನ ದಿವಸ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ, 51 ಕುಟುಂಬಗಳಿಗೆ ಏನು ಪರಿಹಾರ ಸಿಗಬೇಕಾಗಿತ್ತು, ಅದರಲ್ಲಿ 37 ಕುಟುಂಬಗಳಿಗೆ ಮಾತ್ರ 1250 ರೂಪಾಯಿಗಳಂತೆ ಕೊಟ್ಟಿದ್ದಾರೆ. ಇನ್ನು 14 ಕುಟುಂಬಗಳಿಗೆ ಹಣ ಕೊಡಬೇಕಾಗಿದೆ. ಎರಡನೆಯದು, ಆಶ್ರಯ ಯೋಜನೆಯಲ್ಲಿ 18 ಕುಟುಂಬದವರಿಗೆ ಮಾತ್ರ ಮನೆಗಳನ್ನು ಹಂಚಿದ್ದಾರೆ. ಇನ್ನು 33 ಕುಟುಂಬಗಳಿಗೆ ಮನೆಗಳನ್ನು ಹಂಚಬೇಕಾಗಿದೆ. ಆದ್ದರಿಂದ ಈ ಬಗ್ಗೆ ನಾನು ಸಚಿವರಲ್ಲಿ ಏನು ಕೇಳಿಕೊಳ್ಳುವುದು ಎಂದರೆ, 1250 ರೂಪಾಯಿ ಪರಿಹಾರ ಕೊಟ್ಟರೆ ಅವರಿಗೆ ಜಮೀನು ಇಲ್ಲ, ಬೇರೆ ಕಡೆಗೆ ಅವರು ವಾಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಕನಿಷ್ಟ ಪಕ್ಷ ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿ ಪರಿಹಾರ ಧನ ಕೊಡುವಂಥ ವ್ಯವಸ್ಥೆಯಾಗಬೇಕು. ಇವತ್ತು ಯಾರಿಗಾದರೂ ಆಕ್ಸಿಡೆಂಟ್ ಆಗಿ ಸತ್ತರೆ ಐವತ್ತು ಸಾವಿರ, ಒಂದು ಲಕ್ಷ ರೂಪಾಯಿ ಕೊಡುತ್ತೀರಿ. ಇವತ್ತು ಒಂದು ಕುಟುಂಬದಲ್ಲಿ ಐದಾರು ಮಂದಿ ಇದ್ದಾರೆ, ಅವರಿಗೆ ಬರೀ 1250 ರೂಪಾಯಿ ಕೊಡುತ್ತೇವೆ ಎಂದರೆ ಇದಕ್ಕೆ ಏನಾದರೂ ಅರ್ಥ ಇದೆಯೇ? ಮಾಜಿ ವೈದ್ಯಕೀಯ ಸಚಿವರು ಅಲ್ಲಿ ಭೇಟಿಕೊಟ್ಟು ಅಲ್ಲಿ ಪರಿಸ್ಥಿತಿ ಏನಿತ್ತು ಎಂಬುದನ್ನು ಕಣ್ಣಾರೆ ಕಂಡಿದ್ದಾರೆ. ಅವರೂ ಕೂಡ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿರುವುದರಿಂದ, ದಯವಿಟ್ಟು ಪ್ರತಿ ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿಗಳಂತೆ ಕೊಡುವ ವ್ಯವಸ್ಥೆಯಾಗಬೇಕು ಮತ್ತು ಆಶ್ರಯ ಯೋಜನೆಯಡಿಯಲ್ಲಿ ಪ್ರತಿಯೊಂದು ಕುಟುಂಬಕ್ಕೂ

ಮನೆ ಸಿಗುವಂಥ ವ್ಯವಸ್ಥೆಯಾಗಬೇಕು. ನಾವು ತಾಲ್ಲೂಕು ಸಮಿತಿಯನ್ನು ಕೇಳಿದಾಗ . . .

**ಉಪಾಧ್ಯಕ್ಷರು:-** ಭಾಷಣ ಮಾಡುವ ಹಾಗಿಲ್ಲ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:-** ಉಪಾಧ್ಯಕ್ಷರೇ, ನೀವು ನಮ್ಮ ಜಿಲ್ಲೆಯವರು ಇದ್ದೀರಿ. ಒಂದೆರಡು ನಿಮಿಷ ಕೇಳಿ.

**ಉಪಾಧ್ಯಕ್ಷರು:-** ನಿಮಗೆ ಏನು ಬೇಕಾಗಿದೆ, ಆದನ್ನು ಕೇಳಿರಿ. ಭಾಷಣ ಬೇಡ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:-** ನಾನು ಹೇಳಿದ್ದೇನೆ. ಪ್ರತಿ ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿ ಪರಿಹಾರಧನ ಆಗಬೇಕು. ಪ್ರತಿಯೊಂದು ಕುಟುಂಬಕ್ಕೂ ಆಶ್ರಯ ಮನೆ ಆಗಬೇಕು.

**ಶ್ರೀ ರಮೇಶ ಸಿ. ಜಿಗಜಿಣಗಿ:-** ಮಾನ್ಯ ಅಧ್ಯಕ್ಷರೇ, ಈ ಪ್ರತಿಯೊಂದು ಕುಟುಂಬಕ್ಕೆ ಪರಿಹಾರವಾಗಿ 3250 ರೂಪಾಯಿಗಳನ್ನು ಪರಿಹಾರಧನವಾಗಿ ಅವರಿಗೆ ಒದಗಿಸಿದ್ದೇವೆ. 1250 ರೂಪಾಯಿ ಹಣದ ರೂಪದಲ್ಲಿ, ಮತ್ತು 2000 ರೂಪಾಯಿ ಬಿಲ್ಡಿಂಗ್ ಮೆಟೀರಿಯಲ್ಸ್, ಅದು ಕಟ್ಟಿಗೆಯಾಗಿರಬಹುದು, ಮತ್ತೊಂದು ಆಗಿರಬಹುದು; ಈ ರೀತಿ ಸುಮಾರು 3250 ರೂಪಾಯಿಗಳನ್ನು ಪ್ರತಿಯೊಂದು ಕುಟುಂಬಕ್ಕೆ ಒದಗಿಸಿದ್ದು ಒಟ್ಟು 1,20,250 ರೂಪಾಯಿ ಹಣವನ್ನು ಪರಿಹಾರನಿಧಿಯಾಗಿ ಅವರಿಗೆ ಒದಗಿಸಿದ್ದೇವೆ. ಸುಮಾರು 18 ಜನರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರು ಅಲ್ಲಿ ಎಮ್ಮೆ, ದನಕರುಗಳು ಸತ್ತಿವೆ ಎಂದು ಹೇಳಿದ್ದಾರೆ. ಆದರೆ ಅದಕ್ಕೆ ನಾವು ಏನೂ ಪರಿಹಾರ ಕೊಡುವುದಕ್ಕೆ ಆಗಿಲ್ಲ. ಕಾರಣ ಏನು ಎಂದು ಹೇಳಿದರೆ, ಇವರ ವಾರ್ಷಿಕ ಆದಾಯ 66 ಸಾವಿರ ಪ್ರತಿವರ್ಷ ಎಂದು ಹೇಳಿದ್ದಾರೆ. ಆದಕ್ಕೆ ನಿಯಮಾವಳಿಗಳಿಗೆ ಅನುಸಾರವಾಗಿ ವಾರ್ಷಿಕ ವರಮಾನದ ಮಿತಿಯನ್ನು ಮೀರಿರುವುದರಿಂದ ಅವರಿಗೆ ಪರಿಹಾರ ಕೊಡಲಿಕ್ಕೆ ಆಗಲಿಲ್ಲ. ಆದರೂ ಕೂಡ 37 ಕುಟುಂಬಗಳಲ್ಲಿ ಅತ್ಯಂತ ಬಡವರು ಉಳಿದಿದ್ದರೆ, ಅಥವಾ ಅವರಿಗೆ ಮನೆಗಳನ್ನು ಕೊಡುವುದಕ್ಕೆ ಆಗಿಲ್ಲವೆಂದರೆ, ಇನ್ನೊಂದು ಸಲ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ನೀಡುತ್ತೇನೆ. ಅತ್ಯಂತ ಬಡವರು ಯಾರು ಇದ್ದಾರೆ, ಅವರಿಗೆ ಇನ್ನೂ ಒಂದು ಚೂರು ಮನೆ ಕೊಡಿ ಎಂದು ಹೇಳಿ ನಾನು ಸೂಚನೆ ನೀಡುತ್ತೇನೆ.

**ಶ್ರೀ ವಾಟಾಳ್ ನಾಗರಾಜ್:-** ಅಲ್ಲ, ಇನ್ನೊಂದು ಚೂರು ಮನೆ ಕೊಟ್ಟರೆ ಆಗುವುದಿಲ್ಲ. ಇದು ಪ್ರಾಮಾಣಿಕವಾಗಿ ಅವರೆಲ್ಲರಿಗೂ ಮನೆ ಕಟ್ಟಿಸಿಕೊಡಬೇಕು. ಆ ಜನ ಎರಡು ತಿಂಗಳಿಂದ ಬೀದಿಯಲ್ಲಿದ್ದಾರೆ. ಹೀಗಿರುವಾಗ ಇವರು ಕಾನೂನು, ನೀತಿ ಎಂದು ಹೇಳಿಕೊಂಡು ಕುಳಿತರೆ ಆಗುವುದಿಲ್ಲ. ಮಾನ್ಯ ಸಚಿವರು ಮಾನವೀಯತೆ ದೃಷ್ಟಿಯಿಂದ ಅವರೆಲ್ಲರಿಗೂ ಕೂಡಲೇ ಮನೆ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ನಾವು ಕೇಳುತ್ತಿದ್ದೇವೆ. ತಾವು ಆವಾಗ ಏನು ಬೇಕು ಎಂದು ಕೇಳಿದಿರಿ. ನಮಗೆ ಹಣ ಬೇಕು. . .

ಉಪಾಧ್ಯಕ್ಷರು:- ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಹೆಂಚು ಬೇಕು, ಗಳ ಬೇಕು, ಮನೆ ಬೇಕು, ಸಿಮೆಂಟ್ ಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಗುಡಿಸಲುಗಳಿಗೆ ಬೆಂಕಿ ಬಿದ್ದಾಗ, ಸರ್ಕಾರದವರು 500 ರೂಪಾಯಿ ಕೊಡುತ್ತಾರೆ. ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಯಾವುದೋ 20 ವರ್ಷಗಳ ಹಿಂದೆ ನಿಗದಿ ಮಾಡಿರುವಂಥಾದ್ದು. ಬೆಂಕಿ ಬಿದ್ದವರಿಗೆ 500 ರೂಪಾಯಿ ಚೆಕ್ ಕೊಡಿಸಿದರೆ, ಶಾಸಕರ ಪರಿಸ್ಥಿತಿ ಹೇಗಿರುತ್ತೆಂದರೆ, ಅಯ್ಯೋ ಪಾಪ ಎಂದರೆ, ಮಗುವಿನ ತಲೆಗೆ ಎಣ್ಣೆ ಹಾಕಿಲ್ಲ ಎಂಬಂತೆ ಆಗುತ್ತದೆ. ಆದ್ದರಿಂದ, ದಯವಿಟ್ಟು ಈ 500 ರೂಪಾಯಿಗಳಿಗೆ ಬದಲಾಗಿ ಒಂದೂವರೆ ಅಥವಾ ಎರಡು ಸಾವಿರ ರೂಪಾಯಿಗಳನ್ನು ನೀಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಸುಭಾಶ್ ಜೋಶಿಯವರು. ನಿಮ್ಮ ಸಲುವಾಗಿಯೇ ಕೇಳುತ್ತಾರೆ. ಅವರ ಪ್ರಶ್ನೆ ಮುಗಿಯಲಿ.

ಶ್ರೀ ವಾಟಾಳ್ ನಾಗರಾಜ್:- ನನಗೆ ಅವರಿಂದ ಉತ್ತರ ಬರಲಿಲ್ಲ. ತಾವೇ ಧಾರಾಳವಾಗಿ ಏನು ಬೇಕು ಎಂದು ಕೇಳಿ ಎಂದಿರಿ. ನಾವು ಬಹಳ ಪ್ರೀತಿ ವಿಶ್ವಾಸದಿಂದ ಹೇಳಿದ್ದೇವೆ. ಏನೇನು ಬೇಕೋ ಎಲ್ಲಾ ಹೇಳಿದ್ದೇವೆ. ತಾವು ತುಂಬು ಹೃದಯದಿಂದ ಮಾನ್ಯ ಕಂದಾಯ ಸಚಿವರು ಕೊಡುವುದಕ್ಕೆ ಹೇಳಿ ಸ್ವಾಮಿ. ಇದುವರೆಗೆ ಸತ್ತಿರತಕ್ಕ ದನಕರುಗಳಿಗೇ ಹಣ ಕೊಟ್ಟಿಲ್ಲ. ಇದೇನಿದು, ಇವರ ನೀತಿಗಳು?

ಶ್ರೀ ಎಸ್. ಸುಭಾಶ್ ಜೋಶಿ:- ಸಹಾಯನಿಧಿ ಬಹಳ ಕಡಿಮೆ ಇದೆ. ಅವರು 66 ಸಾವಿರ ಏನು ಆದಾಯ ಎಂದು ಹೇಳಿದ್ದಾರೆ, ಆ ಮಾಹಿತಿ ತಪ್ಪಿದೆ. ಮತ್ತೆ ಅವರು ಮಾಹಿತಿ ಕಲೆಕ್ಟ್ ಮಾಡಲಿಕ್ಕೆ ಹೇಳಬೇಕು. ಬೆಂಕಿ ಬಿದ್ದಿರುವುದಕ್ಕೆ ಕೊಡುವ 500 ರೂಪಾಯಿ ಬಹಳ ಕಡಿಮೆಯಾಯಿತು. ಇದನ್ನು ಜಾಸ್ತಿ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ಒಂದು ತಪ್ಪು ಕಲ್ಪನೆ ಏನಾಗಿದೆ ಎಂದರೆ, 66 ಸಾವಿರ ರೂಪಾಯಿ ವಾರ್ಷಿಕ ಆದಾಯ ಇದೆ. ಅದಕ್ಕಾಗಿ ಅವರಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳಿದರು. 66 ಸಾವಿರ ವಾರ್ಷಿಕ ಆದಾಯ ಅವರಿಗೆ ಇದ್ದಿದ್ದರೆ, ಅವರು ಜೋಪಡಿಯಲ್ಲಿರತಕ್ಕ ಪ್ರಶ್ನೆಯೇ ಬರುತ್ತಿರಲಿಲ್ಲ. ಬಹುಶಃ ಅವರಿಗೆ ವರದಿ ತಪ್ಪಾಗಿ ಬಂದಿರಬಹುದು. 66 ಸಾವಿರ ವಾರ್ಷಿಕ ಆದಾಯ ಎಂದರೆ, ಸ್ವಲ್ಪ ಹೆಚ್ಚು ಕಡಿಮೆ ಅವರು ಆದಾಯ ತೆರಿಗೆ ಕೊಡತಕ್ಕಂಥವನೇ. ಅದಕ್ಕಾಗಿ, ಅವರು ಕೇಳತಕ್ಕಂಥಾದ್ದು ಇದೆ. 66 ಸಾವಿರ ಆದಾಯ ಇರತಕ್ಕ ಯಾರಾದರೂ ಒಬ್ಬ ರೈತ ಅದರೊಳಗೆ ಇದ್ದರೆ, ಅಥವಾ ಕೂಲಿಕಾರ ಇದ್ದರೆ, ಎಲ್ಲಾ ದುಡ್ಡು ಕೊಟ್ಟಿದ್ದನ್ನು ವಾಪಾಸ್ ಕೊಡಿಸುತ್ತೇನೆಂದು ಹೇಳುತ್ತಾರೆ. ಅದಕ್ಕೆ, ಇದು ಸ್ವಲ್ಪ ತಪ್ಪು ಮಾಹಿತಿ ಇದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ:- ಅವರಿಗೆ 66 ಸಾವಿರ ಆದಾಯ ಇದ್ದಿದ್ದರೆ, ನಾವು ಪರಿಹಾರ-

ವನ್ನೇ ಕೇಳುತ್ತಾ ಇರಲಿಲ್ಲ.

**ಶ್ರೀ ರಮೇಶ್ ಸಿ. ಜಿಗಜಿಣಗಿ:-** ಸರ್ಕಾರ ನಡೆಸಲೇಬೇಕಾದವರೆಲ್ಲರೂ ಕಾನೂನು ಚೌಕಟ್ಟಿನಲ್ಲಿಯೇ ನಡೆಸಬೇಕಾಗುತ್ತದೆ. ಈ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ, ಕಾನೂನಿನ ಕೆಳಗಡೆ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಹಣವನ್ನು ನಾವೀಗ ಅವರಿಗೆ ಬಿಡುಗಡೆ ಮಾಡಿದ್ದೇವೆ. ಆದರೆ, ಎಮ್ಮೆ ಮತ್ತು ಕರುಗಳು ಸತ್ತಿರುವುದಕ್ಕೆ ನೀವು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನಾನು ಎಲ್ಲರಿಗೂ ಎಂದು ಹೇಳಿಲ್ಲ. ಯಾರ ಮನೆಯಲ್ಲಿ ದನಗಳು, ಕರುಗಳು ಇದ್ದವೋ ಅವರ ವಾರ್ಷಿಕ ಆದಾಯ 66 ಸಾವಿರ ಎಂದು ಹೇಳಿ, ನಮ್ಮ ಅಧಿಕಾರಿಗಳು ಕೊಟ್ಟಿರತಕ್ಕ ವರದಿ ಪ್ರಕಾರ ಹೇಳಿದ್ದೇನೆ. ಪುನಃ ಅದರಲ್ಲೇನಾದರೂ ತಪ್ಪಾಗಿದ್ದರೆ, ಇನ್ನೊಂದು ಸಾರಿ ವರದಿಯನ್ನು ತರಿಸಿಕೊಳ್ಳುತ್ತೇನೆ. ವರಮಾನ ಒಂದು ವರ್ಷಕ್ಕೆ ಅಷ್ಟಿಲ್ಲದಿದ್ದರೆ, ಅವರಿಗೂ ಕೂಡ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಆದರೆ, ಮಾನ್ಯ ಸದಸ್ಯರುಗಳು ನ್ಯಾಚುರಲ್ ಕೆಲಾಮಿಟಿಯೊಳಗೆ ಕೊಡತಕ್ಕ ಹಣ ಬಹಳ ಕಡಿಮೆ ಎಂದು ಹೇಳುತ್ತಿದ್ದಾರೆ. ಅವರೆಲ್ಲರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ನಾನು ಚರ್ಚೆ ಮಾಡಿ ಹೆಚ್ಚಿಗೆ ಮಾಡಿ, ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಾದರೆ, ಇನ್ ಜನರಲ್ಲಾಗಿ ನಾನು ಇನ್ನೊಂದು ಚೂರು ಹೆಚ್ಚಿಗೆ ಮಾಡಿಸುತ್ತೇನೆ.

**ಶ್ರೀ ವಾಟಾಳ್ ನಾಗರಾಜ್:-** ಈಗ ತಮ್ಮ ಮಾತಿಗಾದಾರೂ ಬೆಲೆ ಬೇಡವೇ ಸ್ವಾಮಿ? ನೀವು, ಏನು ಬೇಕು ಎಂದು ಈ ತುಂಬುಸದನದಲ್ಲಿ ಕೇಳಿದಿರಿ. ಅಂದರೆ, ನನಗನ್ನಿಸಿತು, ಧಾರಾಳವಾಗಿ ನೀವು ನಮಗೆ ಸಹಾಯ ಮಾಡುತ್ತೀರಿ ಎಂದು. ಇವರು ಇನ್ನೊಂದು ಚೂರು ಜಾಸ್ತಿ ಮಾಡುತ್ತೇವೆಂದು ಹೇಳುತ್ತಾರೆ. ಇದು ಚೂರು ಪಾರಿನಲ್ಲಿ ಆಗುವುದಿಲ್ಲ. ಈ ರೀತಿ ಮನೆ ಸುಟ್ಟವರಿಗೆ ಸುಮ್ಮನೆ ಯಾವುದೋ ಒಂದು ತೋರಿಕೆ ಉತ್ತರ ನೀಡುವುದು ಸರ್ಕಾರದಲ್ಲಿ ಒಂದು ಸ್ಪಷ್ಟ ನೀತಿ ಇರಬೇಕು. ಮನೆ ಸುಟ್ಟವರಿಗೆ, ಸಂಪೂರ್ಣವಾಗಿ ಮನೆ ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲಿ ಯಾರಾದರೂ ಸತ್ತರೆ, ಸತ್ತವರ ಕುಟುಂಬಕ್ಕೆ ಕನಿಷ್ಟ ಒಂದು ಲಕ್ಷ ರೂಪಾಯಿ ಕೊಡಬೇಕು. ದನಕರುಗಳು ಸತ್ತರೆ, ಆ ದನಕರುಗಳ ಬೆಲೆ ಹೊರಗಡೆ ಎಷ್ಟು ಇದೆ, ಅಷ್ಟು ಬೆಲೆ ಕೊಡಬೇಕು. ಇದೆಲ್ಲಾ ಕೊಡದೇ ಎರಡು ತಿಂಗಳಾಗಿದೆ. ಅವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ, ದನಗಳು ಸತ್ತಿವೆ; ಅವರು ಹಾಲು ಗೀಲು ಕರೆದುಕೊಂಡು ಜೀವನ ಮಾಡುತ್ತಿದ್ದರು. ಅದು ಹೋಗಿದೆ, ವ್ಯವಸಾಯಕ್ಕೆ ತೊಂದರೆಯಾಗಿದೆ. ಆಮೇಲೆ 66 ಸಾವಿರ ವರಮಾನ ಎಂದು ತಹಶೀಲ್ದಾರ್ ಯಾರೋ ಒಬ್ಬ ಸುಳ್ಳು ಸಾಕ್ಷಿ ತಂದು ಮಾನ್ಯ ಮಂತ್ರಿಗಳು ಈ ರೀತಿ ಹೇಳಿದರೆ ನಮ್ಮ ಪರಿಸ್ಥಿತಿ ಏನು?

**ಉಪಾಧ್ಯಕ್ಷರು:-** ಮಾನ್ಯ ಡಿ.ಆರ್. ಪಾಟೀಲರು ಇದರ ಬಗ್ಗೆ ಕೇಳುತ್ತಾರೆ, ಎರಡೂ ಕೂಡಿ ಒಂದೇ ಉತ್ತರ ಹೇಳುತ್ತಾರೆ. ನೀವು ಕುಳಿತುಕೊಳ್ಳಿ.

**ಶ್ರೀ ವಾಟಾಳ್ ನಾಗರಾಜ್:-** ತಾವು ಕುಳಿತುಕೊಳ್ಳಿ ಎಂದು ಹೇಳಿದಿರಿ. ತಮ್ಮ ಮೇಲೆ ಬಹಳ ನಂಬಿಕೆ ಇಟ್ಟುಕೊಂಡು ಕೇಳುತ್ತಾ ಇದ್ದೇವೆ. ತಾವು ನಂಬಿಕೆ ಉಳಿಸಿಕೊಂಡಿದ್ದೀರಿ. ನಮಗೆ ಕೊಡುವುದನ್ನು ತಾವು ಉಳಿಸಿಕೊಳ್ಳಲಿಲ್ಲವಲ್ಲಾ.

**ಉಪಾಧ್ಯಕ್ಷರು:-** ನಂಬಿಕೆ ಯಾವಾಗಲೂ ಇರಲಿ. ಅಪಾರವಾದ ನಂಬಿಕೆ ಇರಲಿ.

**ಶ್ರೀ ವಾಟಾಳ್ ನಾಗರಾಜ್:-** ದುಡ್ಡು ಬಿಡುಗಡೆ ಮಾಡಿದ್ದರೆ, ನಂಬಿಕೆ ಇರುತ್ತಿತ್ತು. ಈಗ ನಂಬಿಕೆಯೇ ಹೋಯಿತಲ್ಲಾ.

**ಒಬ್ಬ ಮಾನ್ಯ ಸದಸ್ಯರು:-** ಉಪಾಧ್ಯಕ್ಷರೇ, ಬಣವೆಗೆ ಬೆಂಕಿ ಬಿದ್ದರೂ ಕೂಡ, ಅಲ್ಲಿ ಹುಲ್ಲು ಮತ್ತು ತೆನೆ ಇದ್ದರೆ, ಬೇರೆಬೇರೆ ಕೊಡುತ್ತೇವೆಂದು ಹೇಳುತ್ತಾರೆ. ತೆನೆ ಇದ್ದರೆ ಬೇರೆ ಕೊಡುತ್ತೇವೆ, ಹುಲ್ಲು ಇದ್ದರೆ ಬೇರೆ ಕೊಡುತ್ತೇವೆ, ಎಂದು ತಹಶೀಲ್ದಾರರು ಹೇಳುತ್ತಾರೆ. ಆದ್ದರಿಂದ ಬಣವೆ ಸುಟ್ಟಿರತಕ್ಕ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ದಯಮಾಡಿ, ತಮ್ಮ ಮುಖೇನ ಕಂದಾಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ವಿ. ಕೃಷ್ಣಮೂರ್ತಿ:-** ನನ್ನ ಕ್ಷೇತ್ರದಲ್ಲಿ 20 ಗುಡಿಸಲುಗಳಿಗೆ ಬೆಂಕಿ ಬಿತ್ತು. ತಹಶೀಲ್ದಾರ್ ಮಹಜರು ಮಾಡಿದರು. 12 ಸಾವಿರದಿಂದ 15 ಸಾವಿರದವರೆಗೆ ನಷ್ಟವಾಗಿದೆಯೆಂದರೆ, ತಕ್ಷಣ ಪರಿಹಾರ ಕೊಡುವುದು ಐದು ನೂರು ರೂಪಾಯಿ. ಮತ್ತೆ ಅದು ಎ.ಸಿ.ಗೆ ಹೋಗಿ, ಎ.ಸಿ.ಯಿಂದ ಬರಬೇಕಾದರೆ, ಒಂದು ತಿಂಗಳು, ಎರಡು ತಿಂಗಳು ಹಿಡಿಯುತ್ತದೆ. ಬೆಂಕಿ ಬಿದ್ದಂಥ ಗುಡಿಸಿಲಿನವರೆಗೆ ಈ ರೀತಿ ಕೊಟ್ಟರೆ ಆಗುವುದಿಲ್ಲ. ದನಕರುಗಳು ಸತ್ತಿದ್ದರೆ, ಅವುಗಳ ಬೆಲೆಯನ್ನು ಅಂದಾಜು ಕಟ್ಟಿ ಸರ್ಕಾರ ಕೊಡಬೇಕಾಗುತ್ತದೆ. ದವಸ ಧಾನ್ಯ ಅಂದಾಜು ಎಷ್ಟು ಆಗಿದೆ, ಅದನ್ನಾದರೂ ಕೊಡಲೇ ಬೇಕಾಗುತ್ತದೆ. 500 ರೂಪಾಯಿ ಕೊಡುವುದಾದರೆ, ನೀವು ಏಕೆ ಕೊಡಬೇಕು? ಅದು ಬಡವರಿಗೇನು ಉಪಯೋಗವಾಗುತ್ತದೆ? ಸರ್ಕಾರ ಅದನ್ನು ಪರಿಶೀಲನೆ ಮಾಡಬೇಕು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:-** ಮಾನ್ಯ ಸದಸ್ಯರುಗಳು ಹೇಳಿದ ಹಾಗೆ, ಅಲ್ಲೇನು ನಷ್ಟವಾಗಿರುತ್ತದೆ, ಗುಡಿಸಲಿನಲ್ಲಿ, ಯಾವುದೇ ವಸ್ತು ಪದಾರ್ಥಗಳಿದ್ದರೂ ಅದಕ್ಕೆ ತಕ್ಕನಾಗಿ ಪರಿಹಾರ ಕೊಡಬೇಕು. ಎರಡನೆಯದು ತುಂಬಾ ವಿಳಂಬ ನೀತಿ. ಗುಡಿಸಲು ಸುಟ್ಟಾಗ ತಾವು ಪರಿಹಾರ ಕೊಡುವುದು ಮುನ್ನೂರು ರೂಪಾಯಿ. ಅವನು ಅದನ್ನು ಪಡೆದುಕೊಳ್ಳುವುದಕ್ಕೋಸ್ಕರವಾಗಿ ಅಲೆದು, ಅಲೆದೂ 300 ರೂಪಾಯಿ ಖರ್ಚಾಗಿರುತ್ತದೆ. ತಾವು ತಹಶೀಲ್ದಾರ್‌ರವರಿಗೆ, ಎ.ಸಿ. ಯವರಿಗೆ, ಡಿ.ಸಿ. ಯವರಿಗೆ ಕೆಲವು ಅಧಿಕಾರವನ್ನು ಕೊಟ್ಟಿದ್ದೀರಿ. ದಯಮಾಡಿ ತಹಶೀಲ್ದಾರ್ ಅವರಿಗೇ ಕೊಡಿ. ಅವನು ಹಣ ತಿಂದರೆ, ಮುನ್ನೂರೂ ತಿನ್ನುತ್ತಾನೆ, ಸಾವಿರವನ್ನೂ ತಿನ್ನುತ್ತಾನೆ, ತಿನ್ನುವವರು. ಆದ್ದರಿಂದ, ತಾವು ತಹಶೀಲ್ದಾರವರಿಗೆ ಪವರ್ ಹಸ್ತಾಂತರ ಮಾಡಬೇಕು. ದಯಮಾಡಿ ಎ.ಸಿ. ಮತ್ತು ಡಿ.ಸಿ.ಯವರ ಹತ್ತಿರ ಅಲೆಸಬೇಡಿ. ಇದನ್ನು ಬದಲಾವಣೆ ಮಾಡಿ.

ಉಪಾಧ್ಯಕ್ಷರು:- ಎಲ್ಲಾ ಸದಸ್ಯರ ಅಭಿಪ್ರಾಯವೂ ಈಗಾಗಲೇ ಹೆಚ್ಚಿಗೆ ಕೊಡಬೇಕೆಂಬುದೇ ಆಗಿರುತ್ತದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:-** ಈಗಾಗಲೇ 2 ತಿಂಗಳಾಗಿದೆ, 2 ತಿಂಗಳಿಂದ ಹಣವನ್ನು ಬಿಡುಗಡೆ ಮಾಡಿಲ್ಲ. ಇನ್ನೂ ಈ ಉತ್ತರ ಹೇಳುತ್ತಿದ್ದಾರೆ, ಸಬೂಬು ಹೇಳುತ್ತಿದ್ದಾರೆ. ನಾವು ಧರಣಿ ಮಾಡಬೇಕಾಗುತ್ತದೆ. ಮಳೆ ಬಿದ್ದು ಎಲ್ಲಾ ಕೊಚ್ಚಿಕೊಂಡು ಹೋಗಿ ಎಲ್ಲಾ ಸತ್ತು ಎರಡು ತಿಂಗಳಾಗಿದ್ದರೂ ಇನ್ನೂ ಪರಿಶೀಲನೆ ಮಾಡುತ್ತೇವೆಂದು ಉತ್ತರ ಹೇಳುತ್ತಿದ್ದಾರೆ. ಇದನ್ನು ಒಪ್ಪಲಿಕ್ಕಾಗುವುದಿಲ್ಲ. ಈ ಬೆಂಕಿ ಬಿದ್ದು ಸುಟ್ಟುಹೋದವರಿಗೆ ಒಂದು ಲಕ್ಷ ಪರಿಹಾರ ಕೊಡಲಿ. ಇಲ್ಲದೇ ಹೋದರೆ ಅಗ್ನಿಶಾಮಕ ದಳವನ್ನು ಖಾಯಂ ಆಗಿ ಹಳ್ಳಿಗಳಲ್ಲಿ ಇಡಲಿ. ಇಲ್ಲದಿದ್ದರೆ, ಇದು ಆಗುವುದಿಲ್ಲ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:-** ಆಶ್ರಯ ಯೋಜನೆಯಲ್ಲಿ ಏನು 23 ಮನೆಗಳನ್ನು ಕೊಡಬೇಕಾಗಿದೆ, ಇವುಗಳನ್ನು ಸರ್ಕಾರದ ಕಡೆಯಿಂದ ಮಂಜೂರು ಮಾಡಿಸುತ್ತೀರೋ ಹೇಗೆ? ಇಲ್ಲಿ 33 ಮನೆಗಳು ಎಂದು ಹೇಳಿದ್ದಾರೆ. ಇಲ್ಲಿ ವಸತಿ ಮಂತ್ರಿಗಳೂ ಇದ್ದಾರೆ. ಅವರ ಮುಖಾಂತರ 33 ಮನೆಗಳನ್ನು ಮಂಜೂರುಮಾಡುವಂಥ ವ್ಯವಸ್ಥೆಯಾಗಬೇಕು.

**ಶ್ರೀ ರಮೇಶ್ ಸಿ. ಜಿಗಜಿಣಗಿ:-** ಒಂದು ವೇಳೆ, ನಿಯಮಾವಳಿ ಕೆಳಗೆ ಅವರಿಗೆ ವಾರ್ಷಿಕ ಆದಾಯ ಎಷ್ಟಿರಬೇಕು, ಅದಕ್ಕಿಂತ ಹೆಚ್ಚು ಇದ್ದರೆ, ಕೊಡುವುದಕ್ಕಾಗುವುದಿಲ್ಲ. ವಾರ್ಷಿಕ ಆದಾಯ ಇದಕ್ಕಿಂತ ಹೆಚ್ಚಿಲ್ಲವೆಂದರೆ, ಆ ಎಲ್ಲಾ ಜನರಿಗೂ ಆಶ್ರಯ ಯೋಜನೆಯಲ್ಲಿ ಮನೆ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಆದರೆ, ಇದಕ್ಕೆ ಕೊಡತಕ್ಕ ಹಣ ಬಹಳ ಕಡಿಮೆ ಎಂದು ಹೇಳುತ್ತಾರೆ. ಆದ್ದರಿಂದ ಸಧ್ಯಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಎಷ್ಟು ಕೊಡುವುದಕ್ಕೆ ಬರುತ್ತದೆಯೋ ಅಷ್ಟು ಹಣವನ್ನು ಈಗ ಬಿಡುಗಡೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಇದು ಹೆಚ್ಚಾಗಬೇಕೆಂದು ಹೇಳುತ್ತಾ ಇದ್ದಾರೆ. ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಅದರೆ, ಇವರಿಗೆ ಬಡವರ ಬಗ್ಗೆ ಕಾಳಜಿ ಇದೆ, ಎಂದಲ್ಲ. ಸರ್ಕಾರದವರಿಗೂ ಕಾಳಜಿ ಇದೆ. ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿಗೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

## 4.10 ಪಿ.ಎಂ.

**ಶ್ರೀ ವಾಟಾಳ್ ನಾಗರಾಜ್:-** ಮಾನ್ಯ ಅಧ್ಯಕ್ಷರೇ, 2 ತಿಂಗಳಾದರೂ ಇನ್ನೂ ಹಣ ಬಿಡುಗಡೆ ಮಾಡದೇ ಇರುವುದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)